**ಗಾಂಧಿ** ಎಂಬುದು ಬರೀ ಹೆಸರಲ್ಲ. ಅದು ಬದುಕುವ ವಿಧಾನವೂ ಹೌದು. ಸರಳತನ, ಸತ್ಯ ಮತ್ತು ಅಹಿಂಸೆ ಮೂಲ ಮಂತ್ರಗಳಾಗಿವೆ. ಜೆನ್‌ಝೀಗಳಿಗೆ ಗಾಂಧಿವಾದಕ್ಕಿಂತಲೂ 'ಗಾಂಧಿಗಿರಿ' ಹೆಚ್ಚು ಹತ್ತಿರವಾಗಿದೆ. ಅವರು ಅರ್ಥ ಮಾಡಿಕೊಂಡಿರುವ ಮಹಾತ್ಮ ಗಾಂಧಿ ಯಾರು? ಯಾವ ತತ್ವಗಳು ಅವರೆದೆಯನ್ನು ಮುಟ್ಟಿವೆ ಎಂಬುದನ್ನು ಸುಧಾ ತಂಡ ಯುವಜನರನ್ನು ಮಾತಾಡಿಸಿದಾಗ ತಿಳಿದುಬಂದ ಅಭಿಪ್ರಾಯಗಳಿವು. ಇಂದಿನ ಸಮಸ್ಯೆಗಳಿಗೆ ಗಾಂಧಿವಾದ ಮತ್ತೆ ಪರಿಹಾರವಾಗಬಲ್ಲದು ಎಂಬುದು ಅವರ ಧ್ವನಿ.

■ ಅಭಿಪ್ರಾಯ ಸಂಗ್ರಹ: **ಶಶಿಕುಮಾರ್ ಸಿ., ಸುಮಲತಾ ಎನ್.**

# ಕಲಾಜೀವನಕ್ಕೂ ಗಾಂಧಿವಾದ ಅನುಕರಣೀಯ



ನಾನು ಕಲಾವಿದನಾಗಿ ಗಾಂಧೀಜಿಯನ್ನು ಕೇವಲ ಇತಿಹಾಸದ ನಾಯಕನಂತೆ ನೋಡುವುದಿಲ್ಲ. ಅವರು ನಮ್ಮನ್ನು ಸದಾ ಪ್ರಶ್ನೆ ಮಾಡಿಸುವ ಕನ್ನಡಿಯಂತೆ ಕಾಣ್ತಾರೆ. ತಮ್ಮನ್ನು ತಾವೇ 'ಪರಿಪೂರ್ಣ'ವೆಂದೂ ಹೇಳಿಕೊಂಡಿಲ್ಲ, ತಪ್ಪು ಮಾಡಿಕೊಂಡರೂ ಮತ್ತೆ ಪ್ರಯತ್ನಿಸಿದ ವ್ಯಕ್ತಿ. ಅದೇ ಗಾಂಧೀಜಿ ದೊಡ್ಡತನ ಮತ್ತು ವಿಶೇಷ ಎಂದು ನನಗೆ ಅನ್ನಿಸುತ್ತೆ. ಸತ್ಯದ ಹುಡುಕಾಟದಲ್ಲಿ ತಪ್ಪಿದರೂ ಮತ್ತೆ ಪ್ರಯತ್ನಿಸುತ್ತಾ ಬದುಕಿದ ಮಹಾತ್ಮ.

ಎಲ್ಲಿಯೋ ಓದಿದ ನೆನಪು 'ಕಲೆ ಎಂದರೆ ಮನಸ್ಸನ್ನು ಶುದ್ಧಗೊಳಿಸುವ ಮತ್ತು ಸಮಾಜವನ್ನು ಬೆಳಗಿಸುವ ಸಾಧನ. ಕಲಾವಿದನ ಕೈಯಲ್ಲಿ ಸತ್ಯವಿರುವಾಗ, ಅದು ಜನರ ಹೃದಯ ತಲುಪುತ್ತದೆ' ಎಂದು. ನಟನಾಗಿ, ನಾನು ಇದನ್ನು ನನ್ನ ಕಲೆಗೂ ನೇರವಾಗಿ ಜೋಡಿಸುತ್ತೇನೆ. ನಾವು ಮಾಡುವ ಪ್ರತಿಯೊಂದು ಪಾತ್ರವೂ ಸತ್ಯವನ್ನು ಹುಡುಕುವ ಒಂದು ಟ್ರಾವೆಲ್. ಸಹಸ್ರಾರು ಕಲಾಪ್ರೇಮಿಗಳ ಹೃದಯ ತಲುಪುವ ಆ ಅವಕಾಶ ನನಗೆ ಸುವರ್ಣ ಅವಕಾಶವಾಗಿ ಕಾಣಿಸತ್ತೆ. ಆ ಅವಕಾಶದಲ್ಲಿ ಒಳ್ಳೆಯ ಮಾನವೀಯ ಮೌಲ್ಯಗಳನ್ನು ಅರಿಯುವುದು, ನಮ್ಮೊಳಗಿನ ಕೆಟ್ಟ ಗುಣಗಳನ್ನು ದೂರ ಮಾಡಿಕೊಳ್ಳುವುದು ಕೂಡ ಒಂದು ಅಮೂಲ್ಯ ಅನುಭವವೆಂದೆನಿಸತ್ತೆ. ಅವರ ಆತ್ಮಕಥೆಯಾದ 'ನನ್ನ ಸತ್ಯಾನ್ವೇಷಣೆ' ಪ್ರತಿ ಬಾರಿ ನನಗೆ ಹೊಸ ಬೆಳಕನ್ನು ತೋರಿಸಿದೆ, ಹೊಸ ದಾರಿಯನ್ನು ರೂಪಿಸುತ್ತಿದೆ.

ಇವತ್ತಿನ ಫಾಸ್ಟ್ ಲೈಫ್ ಜಗತ್ತಿನಲ್ಲಿ ನಾವು ಜಗಳ, ವಿಭಜನೆಗಳಲ್ಲಿ ಒಗ್ಗಟ್ಟನ್ನು ಕಳೆದುಕೊಳ್ಳುತ್ತಿದ್ದೇವೆ. ಇಂತಹ ಸಮಯದಲ್ಲಿ ಗಾಂಧೀಜಿ ಅವರ ಅಹಿಂಸೆ ಅಂದ್ರೆ ಹೊಡೆದಾಟ ಮಾಡದೇ ಇರುವುದು ಮಾತ್ರವಲ್ಲ—ವಿವೇಚನೆಯಿಂದ ಕೇಳುವುದು, ಅರ್ಥಮಾಡಿಕೊಳ್ಳುವುದು, ಕ್ಷಮಿಸುವ ಕಲಿಕೆ ಎಂದು ನನಗೆ ಅನ್ನಿಸತ್ತೆ. ಸರಳತೆ ಎಂದರೆ ಎಲ್ಲವನ್ನೂ ತ್ಯಜಿಸುವುದಲ್ಲ—ನಿಜವಾಗಿ ನಮಗೆ ಎಷ್ಟು ಅಗತ್ಯತೆ ಇದೆಯೆಂದು ಅರಿತುಕೊಳ್ಳುವುದು ಎಂದೆನಿಸುತ್ತೆ. ನಮ್ಮ ಪ್ರತಿ ಸಣ್ಣ ಹೆಜ್ಜೆಯೂ ದೊಡ್ಡ ಬದಲಾವಣೆಗೆ ಕಾರಣವಾಗಬಹುದು ಎಂಬ ನಂಬಿಕೆಯೇ ಅವರ ಸ್ವಾವಲಂಬನೆ ಅನ್ನಿಸುವುದಿದೆ.

ಇಂದಿನ ಜಗತ್ತಿನಲ್ಲಿ ಗೆಲುವು ಎಂದರೆ ಇತರರನ್ನು ಸೋಲಿಸುವುದು ಅಲ್ಲ, ನಿಜವಾದ ಗೆಲುವು ಎಂದರೆ ಅರ್ಥಮಾಡಿಕೊಳ್ಳುವುದು, ವಿಶ್ವಾಸವನ್ನು ಸಾಧಿಸುವುದು, ಪ್ರೀತಿ ಹಂಚುವ ಬೆಳಕನ್ನು ಕಂಡುಕೊಳ್ಳುವುದು. ಗಾಂಧೀಜಿ ನಮ್ಮೆಲ್ಲರಿಗೂ ತೋರಿದ ಆ ಬೆಳಕು, ಇಂದಿಗೂ ಮಾರ್ಗ ತೋರಿಸುವ ದೀಪದಂತೆ ಪ್ರಜ್ವಲಿಸುತ್ತಿದೆ.

**–ಆದಿತ್ಯ ಆಶ್ರೀ, ನಟ**